# ಮೋದಿಯ ಭಾರತದಲ್ಲಿ ಮಾರ್ಕ್ಸ್ ಚಿಂತನೆಯೇ ಪ್ರತಿರೋಧದ ಅಸ್ತ್ರ

ದೀಪಂಕರ್ ಭಟ್ಟಾಚಾರ್ಯ

ಸಂಘಪರಿವಾರ ದೇಶದ ಪ್ರಜಾತಂತ್ರ ವ್ಯವಸ್ಥೆಯ ಮೇಲೆ ಮಾರಣಾಂತಿಕ ಪ್ರಹಾರ ನಡೆಸುತ್ತಿರುವ ಸಂದರ್ಭದಲ್ಲೇ ನಾವು ಕಾರ್ಲ್ ಮಾರ್ಕ್ಸ್‌ನ ಜನ್ಮ ದ್ವಿಶತಮಾನೋತ್ಸವವನ್ನು ಆಚರಿಸುತ್ತಿದ್ದೇವೆ. ಭಾರತೀಯ ಸಮಾಜ ಮತ್ತು ಭಾರತದ ರಾಜಕಾರಣದ ಮೇಲೆ ತನ್ನ ಸಿದ್ಧಾಂತವನ್ನು ಬಲವಂತವಾಗಿ ಹೇರಲು ಸಂಘ ಪರಿವಾರ ಯತ್ನಿಸುತ್ತಿರುವ ಸಂದರ್ಭದಲ್ಲಿ ಮಾರ್ಕ್ಸ್‌ನ ಜನ್ಮ ದ್ವಿಶತಮಾನೋತ್ಸವವನ್ನು ಆಚರಿಸುವ ಮೂಲಕ ನಾವು ಮಾರ್ಕ್ಸ್‌ನ ಚಿಂತನೆಗಳನ್ನು ಗಂಭೀರ ಚರ್ಚೆಗೊಳಪಡಿಸಿ ಪ್ರಜಾತಂತ್ರ, ಸ್ವಾತಂತ್ರ್ಯ ಮತ್ತು ಸಮಾನತೆಯ ಸಾಧನೆಗಾಗಿ ಹೋರಾಡಲು ಮಾರ್ಗಗಳನ್ನು ರೂಪಿಸಲು ಸಾಧ್ಯವಾಗುತ್ತದೆ.

ಫ್ಯಾಸಿಸ್ಟರಿಗೆ ಮಾರ್ಕ್ಸ್‌ನ ಶಕ್ತಿಯ ಅರಿವಿದೆ. 20ನೆಯ ಶತಮಾನದುದ್ದಕ್ಕೂ ವಿಶ್ವದಾದ್ಯಂತ ಫ್ಯಾಸಿಸ್ಟ್ ಶಕ್ತಿಗಳು ತಲೆ ಎತ್ತಿದೆ ಎಲ್ಲ ಸಂದರ್ಭಗಳಲ್ಲೂ ಮಾರ್ಕ್ಸ್‌ನ ಅನುಯಾಯಿಗಳು ಅಂತಿಮ ಕ್ಷಣದವರೆಗೂ ಅದರ ವಿರುದ್ಧ ಹೋರಾಡಿ ಇತಿಹಾಸದ ಕಸದ ಬುಟ್ಟಿಗೆ ಸೇರಿಸಿದ್ದಾರೆ. ಜರ್ಮನಿಯ ಇತಿಹಾಸದ ಪ್ರಧಾನ ಮಾದರಿಯಾಗಿ ಕಾಣುವ ಫ್ಯಾಸಿಸ್ಟ್‌ಗಳು ಆರಾಧಿಸುವ ಹಿಟ್ಲರ್ ಎರಡನೆ ಮಹಾಯುದ್ಧದಲ್ಲಿ ಸೋವಿಯತ್ ಸಂಘದ ಕೆಂಪು ಸೇನೆಗೆ ಬಲಿಯಾಗಿದ್ದ. ಇದು ಕೇವಲ ಸೇನೆಯ ವಿಜಯ ಆಗಿರಲಿಲ್ಲ. ಈ ಸೈದ್ಧಾಂತಿಕ ವಿಜಯದ ಪರಿಣಾಮವಾಗಿ ವಿಶ್ವದಾದ್ಯಂತ ಪ್ರಜಾತಂತ್ರ, ಸ್ವಾತಂತ್ರ್ಯ ಮತ್ತು ಸಮಾನತೆಯ ಹೋರಾಟಗಳು ಸ್ಫೂರ್ತಿ ಪಡೆದಿದ್ದವು, ಶಕ್ತಿಯುತವಾಗಿದ್ದವು. ಇಂದು ಭಾರತದಲ್ಲಿ ನಾವು ಫ್ಯಾಸಿಸ್ಟರನ್ನು ಎದುರಿಸಿ ಹೋರಾಡುವ ಸಂದರ್ಭದಲ್ಲಿ ನಮ್ಮ ತತ್ವಶಾಸ್ತ್ರಜ್ಞರಾಗಿ, ಸಂಗಾತಿಯಾಗಿ, ಮಾರ್ಗದರ್ಶಕನಾಗಿ ಮಾರ್ಕ್ಸ್ ನಿಲ್ಲುತ್ತಾರೆ.

ತಮ್ಮ ಜೀವಿತಾವಧಿಯಲ್ಲಿ ಕಾರ್ಲ್ ಮಾರ್ಕ್ಸ್ ಭಾರತದ ಹಿತೈಶಿಯಾಗಿದ್ದರು, ಸಂಗಾತಿಯೂ ಆಗಿದ್ದರು. ಮಾರ್ಕ್ಸ್‌ನನ್ನು ವಿದೇಶೀಯನೆಂದು ಜರೆಯುವ ಮೂಲಕವೇ ನಮ್ಮನ್ನು ದೂರ ಇರಿಸಬಹುದೆಂದು ಸಂಘಪರಿವಾರ ಭಾವಿಸುತ್ತದೆ. ನಿಜ, ಮಾರ್ಕ್ಸ್ ಮೂಲತಃ ಜರ್ಮನ್ ಪ್ರಜೆ, ಅವರು ಎಂದೂ ಭಾರತಕ್ಕೆ ಭೇಟಿ ನೀಡಲಿಲ್ಲ. ಆದರೆ 1850ರಿಂದ 1883ರಲ್ಲಿ ತನ್ನ ಕೊನೆಯ ಉಸಿರಿರುವವರೆಗೂ ಮಾರ್ಕ್ಸ್ ಭಾರತದ ಮೇಲೆ ದಬ್ಬಾಳಿಕೆ ನಡೆಸಿ ಲೂಟಿ ಮಾಡುತ್ತಿದ್ದ ಬ್ರಿಟನ್ನಿನ ರಾಜಧಾನಿ ಲಂಡನ್ನಿನಲ್ಲಿ ನೆಲೆಸಿದ್ದರು. ಲಂಡನ್ನಿನಲ್ಲಿದ್ದಾಗಲೇ ಮಾರ್ಕ್ಸ್ ಬಂಡವಾಳದ ನಿಗೂಢತೆಯನ್ನು ಶೋಧಿಸತೊಡಗಿದ್ದರು ಮತ್ತು ಎಲ್ಲ ದೇಶಗಳ ಕಾರ್ಮಿಕ ವರ್ಗಗಳು ಒಗ್ಗಟ್ಟಾಗುವ ಮೂಲಕ ಬಂಡವಾಳದ ಶೋಷಣೆಯ ವಿರುದ್ಧ ಹೋರಾಡಲು ಪ್ರೇರೇಪಿಸಿದ್ದರು. ಆ ಕಾಲಘಟ್ಟದಲ್ಲಿ ಭಾರತದಲ್ಲಿ ಆಧುನಿಕ ಕಾರ್ಮಿಕ ವರ್ಗ ಇರಲಿಲ್ಲ ಆದರೆ ವಸಾಹತು ವಿರೋಧಿ ಹೋರಾಟಗಳು ಆರಂಭವಾಗಿದ್ದವು. ಮಾರ್ಕ್ಸ್ ಈ ಹೋರಾಟಗಳನ್ನು ಕುತೂಹಲದಿಂದ ಗಮನಿಸುತ್ತಿದ್ದರು.

ಬ್ರಿಟನ್ನಿನ ವಸಾಹತುಶಾಹಿ ಆಳ್ವಿಕರು ತಮ್ಮ ವಸಾಹತು ಆಳ್ವಿಕೆಯನ್ನು ಮರೆಮಾಚಲು ತಾವು ನಾಗರಿಕತೆಯ ಮಹತ್ತರ ಧ್ಯೇಯ ಹೊಂದಿದ್ದೇವೆ ಎಂದು ಹೇಳುತ್ತಿದ್ದರು. ಭಾರತಕ್ಕೆ ತಾವು ದಂಡೆತ್ತಿ ಬಂದಿದ್ದನ್ನು ಬ್ರಿಟೀಷರು ಅಭಿವೃದ್ಧಿ ಮತ್ತು ಸಬಲೀಕರಣದ ಮಹತ್ತರ ಪ್ರಯತ್ನ ಎಂದು ಬಣ್ಣಿಸುತ್ತಿದ್ದರು. ಮಾರ್ಕ್ಸ್ ಈ ಸಂಕುಚಿತ ವಿಶ್ಲೇಷಣೆಯನ್ನು ವ್ಯವಸ್ಥಿತವಾಗಿ ಪ್ರಶ್ನಿಸಿದ್ದೇ ಅಲ್ಲದೆ ಭಾರತದಲ್ಲಿ ವಸಾಹತು ಆಳ್ವಿಕೆಯ ನೈಜ ಸ್ವರೂಪವನ್ನು ಬಯಲು ಮಾಡಿದ್ದರು. ಜುಲೈ 1853ರ ವೇಳೆಗೇ, ಸಂತಾಲ್ ದಂಗೆಯ ಎರಡು ವರ್ಷಗಳ ಮುನ್ನ ಮತ್ತು ಐತಿಹಾಸಿಕ 1857ರ ಸಿಪಾಯಿ ದಂಗೆಯ ನಾಲ್ಕು ವರ್ಷಗಳ ಮುನ್ನ ಮಾರ್ಕ್ಸ್ ಭಾರತದಲ್ಲಿ ಬ್ರಿಟೀಷರ ವಸಾಹತು ಆಳ್ವಿಕೆ ಕೊನೆಗೊಳ್ಳುವ ಕನಸು ಕಂಡಿದ್ದರು. ಬ್ರಿಟನ್ನಿನಲ್ಲಿ ನಡೆಯುವ ಶ್ರಮಜೀವಿಗಳ ಕ್ರಾಂತಿ ಅಥವಾ ವಸಾಹತು ಆಳ್ವಿಕೆಯನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಭಾರತೀಯರು ಪ್ರಬಲರಾಗುವ ಮೂಲಕ ಮಾರ್ಕ್ಸ್ ತಮ್ಮ ಕನಸು ಸಾಕಾರಗೊಳ್ಳುತ್ತದೆ ಎಂದು ಭಾವಿಸಿದ್ದರು. ಇದು ಭಾರತದ ಸ್ವಾತಂತ್ರ್ಯದ ಪ್ರಪ್ರಥಮ ಕಾಣ್ಕೆಯಾಗಿತ್ತು. ವಸಾಹತು ಆಳ್ವಿಕೆ ಕೊನೆಗೊಳ್ಳುವ

ನೂರು ವರ್ಷಗಳ ಮುನ್ನವೇ ಮಾರ್ಕ್ಸ್ ಇದರ ಮುನ್ಸೂಚನೆ ನೀಡಿದ್ದರು.

ತನ್ನ ದೇಶದಲ್ಲಿ ಪ್ರಜಾತಂತ್ರದ ಬಗ್ಗೆ ಉತ್ಸಾಹ ತೋರುತ್ತಲೇ ತನ್ನ ವಸಾಹತುಗಳಲ್ಲಿ ಕ್ರೂರ ಪೊಲೀಸ್ ಆಡಳಿತವನ್ನು ಅನುಸರಿಸುತ್ತಿದ್ದ ಬ್ರಿಟೀಷರ ಠಕ್ಕುತನವನ್ನು ಖಂಡತುಂಡವಾಗಿ ವಿಮರ್ಶಿಸುತ್ತಿದ್ದ ಮಾರ್ಕ್ಸ್ ಬ್ರಿಟೀಷ್ ಪೂರ್ವ ಭಾರತದ ಸಾಮಾಜಿಕ ವ್ಯವಸ್ಥೆಯನ್ನೂ ಒಪ್ಪುತ್ತಿರಲಿಲ್ಲ. ಭಾರತದ ಸಾಮಾಜಿಕ ವ್ಯವಸ್ಥೆಯನ್ನು ವಿಶ್ಲೇಷಿಸುವ ನಿಟ್ಟಿನಲ್ಲಿ ಜಾತಿ ಮತ್ತು ಸಾಮಾಜಿಕ ಗುಲಾಮಗಿರಿ ಪದ್ಧತಿಯನ್ನು ಅರಿತಿದ್ದ ಮಾರ್ಕ್ಸ್ ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಪೌರ್ವಾತ್ಯ ಸರ್ವಾಧಿಕಾರ ಎಂದು ಬಣ್ಣಿಸುತ್ತಿದ್ದರು. ವಸಾಹತು ಭಾರತದಲ್ಲಿದ್ದ ಆಂತರಿಕ ಸಾಮಾಜಿಕ ವ್ಯವಸ್ಥೆಯನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಜ್ಯೋತಿ ಬಾ ಫುಲೆ ಮುಂತಾದ ಚಿಂತಕರೂ ಸಹ ಗುಲಾಮಗಿರಿ ಎಂಬ ಪದವನ್ನು ಬಳಸುತ್ತಾರೆ. ಭಾರತದ ಸ್ವಾತಂತ್ರ್ಯ ಸಂಗ್ರಾಮವನ್ನು ಕುರಿತು ವಿಶ್ಲೇಷಿಸುವಾಗ ವಸಾಹತು ಆಳ್ವಿಕೆಯಿಂದ ವಿಮೋಚನೆಯನ್ನು ಬಯಸಿ ಹೋರಾಡಲು ಉತ್ಸುಕರಾಗಿದ್ದ ಭಾರತೀಯರ ಸ್ವಾತಂತ್ರ್ಯದ ಹಪಾಹಪಿಯನ್ನೂ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ ಹಾಗೆಯೇ ಮಾರ್ಕ್ಸ್ ಹೇಳುವ ಪೌರ್ವಾತ್ಯ ಸರ್ವಾಧಿಕಾರ ಅಥವಾ ಫುಲೆ ಹೇಳುವ ಹಾಗೆ ಗುಲಾಮಗಿರಿಯನ್ನು ಕೊನೆಗೊಳಿಸುವ ಜನತೆಯ ಆಶಯವನ್ನೂ ಪರಿಗಣಿಸಬೇಕಾಗುತ್ತದೆ.

ಸೋವಿಯತ್ ಪತನದ ನಂತರ ವಿಶ್ವದಾದ್ಯಂತ ಬಂಡವಾಳ ವ್ಯವಸ್ಥೆಯ ಸಮರ್ಥಕರು ಮಾರ್ಕ್ಸ್‌ನನ್ನು ಸಮಾಧಿ ಮಾಡಿರುವುದಾಗಿ ಘೋಷಿಸಿ ವಿಜೃಂಭಿಸಿದ್ದರು. ಆದರೆ 21ನೆಯ ಶತಮಾನಕ್ಕೆ ಕಾಲಿಡುತ್ತಿದ್ದಂತೆಯೇ ಬಂಡವಾಳ ವ್ಯವಸ್ಥೆ ತೀವ್ರವಾದ ಬಿಕ್ಕಟ್ಟಿಗೆ ಸಿಲುಕಿತ್ತು. ಈ ಸಂದರ್ಭದಲ್ಲಿ ಮಾರ್ಕ್ಸ್ ಮತ್ತೊಮ್ಮೆ ಪುಟಿದೆದ್ದು ಬಂದಿದ್ದಾರೆ. ಬಂಡವಾಳ ವ್ಯವಸ್ಥೆ ಬಿಕ್ಕಟ್ಟು ಎದುರಿಸಿದಾಗೆಲ್ಲಾ ಬಂಡವಾಳ ವ್ಯವಸ್ಥೆಯ ನಿರ್ವಾಹಕರು ಬಿಕ್ಕಟ್ಟನ್ನು ಗ್ರಹಿಸಲು ಮಾರ್ಕ್ಸ್‌ಗೆ ಮೊರೆ ಹೋಗುತ್ತಾರೆ. 20ನೆಯ ಶತಮಾನದ ಅಂತ್ಯದಲ್ಲಿ ಸೋವಿಯತ್ ಸಂಘ ಪತನಗೊಂಡಿದ್ದು ಕಮ್ಯುನಿಸ್ಟ್ ಚಳುವಳಿಗೆ ಹಿನ್ನಡೆ ಉಂಟುಮಾಡಿದ್ದು ಸತ್ಯ. ಆದರೆ ಈ ಬೆಳವಣಿಗೆಗಳು ಮಾರ್ಕ್ಸ್ ಮತ್ತು ಮಾರ್ಕ್ಸ್‌ವಾದವನ್ನು ಸೋವಿಯತ್ ಸಂಘದ ಬಿಗಿ ಹಿಡಿತದಿಂದ ಮುಕ್ತಗೊಳಿಸಿದ್ದೂ ವಾಸ್ತವ. ಇದರ ಪರಿಣಾಮ ವಿಶ್ವದಾದ್ಯಂತ ಕಮ್ಯುನಿಸ್ಟರು ಸೋವಿಯತ್ ನಂತರದ ಜಗತ್ತಿನ ಸವಾಲುಗಳನ್ನು ಎದುರಿಸಲು ಸಜ್ಜಾಗಿದ್ದೇ ಅಲ್ಲದೆ, ಸೋವಿಯತ್ ನಂತರದ ಹೊಸ ಪೀಳಿಗೆಯ ಮಾರ್ಕ್ಸ್‌ವಾದಿಗಳನ್ನೂ ಸೃಷ್ಟಿಸಿದೆ. ಈ ಮಾರ್ಕ್ಸ್‌ವಾದಿ ಚಿಂತಕರು ಸೋವಿಯತ್ ಪತನವನ್ನು ಮೀರಿದ ಚಿಂತನೆ ಹೊಂದಿರುವುದು ಸ್ವಾಗತಾರ್ಹ.

ತಮ್ಮ ಜೀವಿತಾವಧಿಯಲ್ಲಿ ಮಾರ್ಕ್ಸ್ ಯಾವುದೇ ಒಂದು ನಿರ್ದಿಷ್ಟ ಮಾದರಿಯೊಡನೆ ಗುರುತಿಸಿಕೊಳ್ಳಲಿಲ್ಲ. ತನ್ನ ಅತ್ಯಂತ ನಿಕಟವರ್ತಿ ಮತ್ತು ಸಂಗಾತಿ ಫ್ರೆಡ್ರಿಕ್ ಏಂಗೆಲ್ಸ್ ಅವರೊಡನೆ ಕೂಡಿ ಫೆಬ್ರವರಿ 1848ರಲ್ಲಿ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ರಚಿಸಿದ್ದರು. ಜಗತ್ತಿಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸಂದೇಶ ಸಾರಿದ ಫ್ರೆಂಚ್ ಕ್ರಾಂತಿ ಸಂದೇಶವನ್ನು ಮುನ್ನಡೆಸಿ ಯೂರೋಪಿನಾದ್ಯಂತ ಪ್ರಗತಿಪರ ಕ್ರಾಂತಿಗಳು ಉಂಟಾಗುತ್ತವೆ ಎಂಬ ನಿರೀಕ್ಷೆಯಿಂದ ಮಾರ್ಕ್ಸ್ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ರೂಪಿಸಿದ್ದರು. ಆದರೆ 1848ರಲ್ಲಿ ತದ್ವಿರುದ್ಧದ ಬೆಳವಣಿಗೆಗಳು ಉಂಟಾಗಿದ್ದವು. ಯೂರೋಪ್‌ನಲ್ಲಿ ಬೂರ್ಷ್ವಾ ಆಡಳಿತ ವರ್ಗಗಳು ದುಡಿಯುವ ವರ್ಗಗಳ ಮುನ್ನಡೆಗೆ ಕಡಿವಾಣ ಹಾಕಿ ತಮ್ಮ ಪ್ರಾಬಲ್ಯ ಸಾಧಿಸುವ ಮೂಲಕ ಕ್ರೋಢೀಕೃತಗೊಂಡಿದ್ದವು. 1871ರ ಪ್ಯಾರಿಸ್ ಕಮ್ಯೂನ್‌ವರೆಗೂ ಯೂರೋಪಿನಲ್ಲಿ ದುಡಿಯುವ ವರ್ಗಗಳ ದಂಗೆ ಸಾಧ್ಯವಾಗಿರಲಿಲ್ಲ. ಈ ದಂಗೆಯೂ ಸಹ ಎಪ್ಪತ್ತು ದಿನಗಳಲ್ಲಿ ನಂದಿಹೋಗಿತ್ತು. ಆದರೆ ಇದರಿಂದ ಸಮಾಜವಾದಿ ದೃಷ್ಟಿಕೋನ ಗಟ್ಟಿಯಾಗಿ ಬೇರೂರುವುದು ಸಾಧ್ಯವಾಗಿತ್ತು. ತಮ್ಮ ಜೀವಿತಕಾಲದಲ್ಲಿ ಅಂತರ ರಾಷ್ಟ್ರೀಯ ದುಡಿಯುವ ವರ್ಗಗಳ ಸಂಘಟನೆಯ ಮೂಲಕ ದುಡಿಯುವ ವರ್ಗಗಳ ಚಳುವಳಿಗಳನ್ನು ಒಂದಾಗಿಸುವ ಮಾರ್ಕ್ಸ್‌ನ ಕನಸು ವಿಶ್ವದ ಇತಿಹಾಸದಲ್ಲೇ ಮೊದ ಬಾರಿ ನಡೆದ ಮೊದಲನೆಯ ಅಂತರರಾಷ್ಟ್ರೀಯ ಸಭೆಯಲ್ಲಿ ಸಾಕಾರಗೊಳ್ಳುವುದರಲ್ಲಿತ್ತು. ಆದರೆ ಪ್ಯಾರಿಸ್ ಕಮ್ಯೂನ್ ಕುರಿತಾದ ತಾತ್ವಿಕ ಚರ್ಚೆಗಳು ಮತ್ತು ಹಿನ್ನಡೆಗಳ ಪರಿಣಾಮ ಇದು ಸಾಧ್ಯವಾಗಲಿಲ್ಲ. ಇದರಿಂದ ತಿಳಿಯಬಹುದಾದ ವಾಸ್ತವ ಏನೆಂದರೆ ನಿರ್ದಿಷ್ಟ ಯಶಸ್ವಿ ಸೂತ್ರಗಳನ್ನು ಆಧರಿಸಿದ ಬೃಹತ್ ಮಾದರಿಗಳ ಆಧಾರದ ಮೇಲೆ ಮಾರ್ಕ್ಸ್ ಜನಪ್ರಿಯತೆ ಪಡೆಯಲಿಲ್ಲ. ಬದಲಾಗಿ ಈ ಮಾದರಿಗಳು ಅನೇಕ

ದಮನಕಾರಿ ಸನ್ನಿವೇಶಗಳನ್ನು ಎದುರಿಸಿ, ಹಿನ್ನಡೆಗಳನ್ನು ಹಿಮ್ಮೆಟ್ಟಿ ಯಶಸ್ಸಿನತ್ತ ಮುನ್ನಡೆದವು . ಕಾರಣ, ಸಾಮಾಜಿಕ ಪರಿವರ್ತನೆಗಾಗಿ ಇದ್ದ ತುರ್ತು ಮತ್ತು ಅವಶ್ಯಕತೆಯನ್ನು ಇದು ಪ್ರತಿಬಿಂಬಿಸಿತ್ತು. ಬಂಡವಾಳ ವ್ಯವಸ್ಥೆಯ ಕ್ರೌರ್ಯ ಮತ್ತು ಪ್ರಕ್ಷುಬ್ಧತೆ ಹಾಗೂ ಬಿಕ್ಕಟ್ಟುಗಳನ್ನು ಮೀರಿದ ಸಮಾಜಕ್ಕಾಗಿ ಇದ್ದ ಹಪಹಪಿಯನ್ನು ಇದು ಪ್ರತಿನಿಧಿಸಿತ್ತು.

ತಾನು ಹುಟ್ಟಿದ ಇನ್ನೂರು ವರ್ಷಗಳ ನಂತರವೂ ಮಾರ್ಕ್ಸ್‌ನ ಪ್ರತಿಧ್ವನಿ ಕೇಳಿಬರುತ್ತಲೇ ಇರುವುದಕ್ಕೆ ಕಾರಣ ಮಾರ್ಕ್ಸ್ ಒಬ್ಬ ತತ್ವಶಾಸ್ತ್ರಜ್ಞ ಮಾತ್ರವಲ್ಲದೆ ಪರಿವರ್ತನೆಯ ಹರಿಕಾರನೂ ಆಗಿದ್ದ. ತನ್ನ ಜೀವಮಾನವೆಲ್ಲಾ " ತತ್ವಶಾಸ್ತ್ರಜ್ಞರು ಜಗತ್ತನ್ನು ಹಲವು ವಿಧಾನಗಳಲ್ಲಿ ವ್ಯಾಖ್ಯಾನಿಸಿದ್ದಾರೆ ಆದರೆ ಮುಖ್ಯವಾಗಿ ಜಗತ್ತಿನ ಪರಿವರ್ತನೆ ಅಗತ್ಯವಾಗಿ ಬೇಕಿದೆ " ಎಂಬ ಘೋಷಣೆಗೆ ಬದ್ಧವಾಗಿದ್ದುದನ್ನು ಗಮನಿಸಬಹುದು. ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ರಚಿಸುವ ಮುನ್ನವೇ ತಾನು ರೂಪಿಸಿದ್ದ ವಿಧಾನಗಳನ್ನೇ ಮಾರ್ಕ್ಸ್ ಅನುಸರಿಸಿದ್ದನ್ನು ಗುರುತಿಸಬಹುದು. ಜಗತ್ತಿನ ಎಲ್ಲ ವಿದ್ಯಮಾನಗಳನ್ನೂ ವಸ್ತುನಿಷ್ಟವಾಗಿ ವಿಶ್ಲೇಷಿಸುವುದು, ಆಳುವ ವರ್ಗಗಳ ಕ್ರೂರ ದಬ್ಬಾಳಿಕೆಯನ್ನು ಸಹಿಸಿಕೊಳ್ಳುವುದು ಮತ್ತು ಇದರ ಪರಿಣಾಮಗಳನ್ನೂ ದಿಟ್ಟವಾಗಿ ಎದುರಿಸುವುದು ಮಾರ್ಕ್ಸ್‌ನ ಧ್ಯೇಯವಾಗಿತ್ತು. ಸಮಾನತೆ ಮತ್ತು ವಿಮೋಚನೆಯನ್ನು ಆಧರಿಸಿದ ಸಮಾಜದ ನೀಲಿ ನಕ್ಷೆಯನ್ನಾಗಲೀ, ಯೋಜನೆಯನ್ನಾಗಲೀ ಸಿದ್ಧಪಡಿಸಲು ಮಾರ್ಕ್ಸ್ ಮುಂದಾಗಲಿಲ್ಲ. ಇದರ ವಿವರಗಳನ್ನು ಪರಿಶೀಲಿಸಿ ಮುನ್ನಡೆಯುವ ಹೊಣೆಗಾರಿಕೆಯನ್ನು ಮಾರ್ಕ್ಸ್ ಮುಂದಿನ ಪೀಳಿಗೆಗೆ ಬಿಟ್ಟುಕೊಟ್ಟಿದ್ದರು. ಆ ಕ್ಷಣದಲ್ಲಿ ಪರಿವರ್ತನೆಗಾಗಿ, ಬದಲಾವಣೆಗಾಗಿ ಹೋರಾಡುವುದು ಮಾರ್ಕ್ಸ್‌ನ ಮುಖ್ಯ ಗುರಿಯಾಗಿತ್ತು. ಇತಿಹಾಸ ಸೃಷ್ಟಿಸಿದ ಮತ್ತು ಕೊಡಮಾಡುವ ಪರಿಸ್ಥಿತಿ ಮತ್ತು ಸನ್ನಿವೇಶಗಳ ಚೌಕಟ್ಟಿನಲ್ಲೇ ಹೋರಾಡುವುದು ಮಾರ್ಕ್ಸ್ ಉದ್ದಿಶ್ಯವಾಗಿತ್ತು. ಸಾಮಾಜಿಕ ಜೀವನದಲ್ಲಿ ಬದಲಾವಣೆಯನ್ನು ಸದಾ ಶಾಶ್ವತ ಎಂದು ಪರಿಗಣಿಸುತ್ತಿದ್ದ ಮಾರ್ಕ್ಸ್ ಬದಲಾವಣೆಯನ್ನು ನಿರಂತರ ಪ್ರಕ್ರಿಯೆಯೆಂದೂ ಗುರುತಿಸಿದ್ದರು. ಆದರೆ ಎಂದಿಗೂ ಏಕರೂಪಿ ಎಂದು ಭಾವಿಸಿರಲಿಲ್ಲ. ಏಕೆಂದರೆ ಮಾನವನ ಜೀವನ ಎಂದೂ ನೇರ ಮಾರ್ಗದಲ್ಲಿ ಮುನ್ನಡೆಯುವುದಿಲ್ಲ, ಏರಿಳಿತಗಳು ಇದ್ದೇ ಇರುತ್ತವೆ ಎನ್ನುವುದು ಮಾರ್ಕ್ಸ್‌ನ ಅಭಿಪ್ರಾಯವಾಗಿತ್ತು. ಹಾಗಾಗಿ ಮಾರ್ಕ್ಸ್‌ನಲ್ಲಿ ಬದಲಾವಣೆಗಾಗಿ ನಿರ್ದಿಷ್ಟವಾದ ಸಂದರ್ಭವಾಗಲೀ ಅಥವಾ ಕನಿಷ್ಠ ಗುರಿಯಾಗಲೀ ಕಾಣಲಾಗುವುದಿಲ್ಲ. ಮಾರ್ಕ್ಸ್‌ವಾದ ಯಾವುದೇ ಸಂದರ್ಭದಲ್ಲಿ ಬದಲಾವಣೆಗಾಗಿ ಹೋರಾಡಲು ನಮಗೆ ಪ್ರೇರಣೆ ನೀಡುತ್ತದೆ.

ಬಂಡವಾಳದ ನಿಗೂಢತೆಯನ್ನು ನಮ್ಮೆದುರು ಬಯಲು ಮಾಡಿದ ಕೀರ್ತಿ ಮಾರ್ಕ್ಸ್‌ಗೆ ಸಲ್ಲಬೇಕು. ಮಾನವ ಸಮಾಜ ತನ್ನ ಅಭ್ಯುದಯದ ಹಾದಿಯಲ್ಲಿ ಸೃಷ್ಟಿಸಿದ ಬಂಡವಾಳ ಇಂದು ಮಾನವನ ಪ್ರತಿಯೊಂದು ಚಟುವಟಿಕೆಯನ್ನೂ ನಿಯಂತ್ರಿಸುತ್ತಿದೆ. ಈ ಬಂಡವಾಳದ ನಿಜರೂಪವನ್ನು ಪರಿಚಯಿಸಿದ್ದು ಮಾರ್ಕ್ಸ್. ನೈಸರ್ಗಿಕ ಸಂಪನ್ಮೂಲಗಳು, ಮಾನವ ಶ್ರಮ ಮತ್ತು ಭೂಮಿಯ ಜೊತೆಗೆ ಉತ್ಪಾದನೆಯ ಪ್ರಕ್ರಿಯೆಯಲ್ಲಿ ಬಂಡವಾಳವೂ ಒಂದು ಸಾಧನ ಎಂದು ನಮಗೆ ಭೋಧಿಸಲಾಗಿದೆ. ಆದರೆ ನೈಸರ್ಗಿಕ ಸಂಪನ್ಮೂಲಗಳು ಮತ್ತು ಜೀವಂತ ಶ್ರಮಕ್ಕೆ ಹೋಲಿಸಿದರೆ ಬಂಡವಾಳಕ್ಕೆ ಸ್ವಾಭಾವಿಕವಾದದ್ದೇನೂ ಇಲ್ಲ. ಬಂಡವಾಳ ರೂಪುಗೊಳ್ಳುವ ಪ್ರಕ್ರಿಯೆ ಮತ್ತು ಬಂಡವಾಳದ ಕ್ರೋಢೀಕರಣವನ್ನು ಮಾರ್ಕ್ಸ್ ನಮಗೆ ಪರಿಚಯಿಸುತ್ತಲೇ ಬಂಡವಾಳದ ಕ್ರೌರ್ಯ ಮತ್ತು ಹಿಂಸಾತ್ಮಕ ಸ್ವರೂಪ, ಲೂಟಿ ಮತ್ತು ದರೋಡೆ, ಗುಲಾಮಗಿರಿ ಮತ್ತು ಅಮಾನವೀಯ ಲಕ್ಷಣಗಳು ಹೇಗೆ ಬಂಡವಾಳದ ಆದಿಮ ಸಂಚಯದ ಅಂಶಿಕ ಭಾಗವಾಗಿ ಕಾರ್ಯ ನಿರ್ವಹಿಸುತ್ತವೆ ಎಂದು ಮಾರ್ಕ್ಸ್ ನಿರೂಪಿಸುತ್ತಾರೆ. ಬಂಡವಾಳದ ಆದಿಮ ಸಂಚಯದ ಈ ಸ್ವರೂಪವನ್ನು ನಾವು ಇಂದಿಗೂ ಸಹ ವಿಶ್ವದಾದ್ಯಂತ ಜನಸಮುದಾಯಗಳಿಂದ ಕಸಿದುಕೊಳ್ಳಲಾಗುವ ಸಂಪನ್ಮೂಲಗಳ ರೂಪದಲ್ಲಿ ಕಾಣುತ್ತಿದ್ದೇವೆ. ಬಂಡವಾಳ ಪ್ರೇರಿತ ಅಭಿವೃದ್ಧಿಯಿಂದ ವಂಚಿತವಾದ ದೇಶ ಮತ್ತು ಪ್ರಾಂತ್ಯಗಳಲ್ಲಿ ಇದು ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಮಾರ್ಕ್ಸ್‌ನ ಸ್ಮರಣಾರ್ಹ ಮಾತುಗಳಲ್ಲೇ ಹೇಳುವುದಾದರೆ ಹಣ ಈ ಪ್ರಪಂಚಕ್ಕೆ ಬರುವಾಗ ತನ್ನ ಒಂದು ಕೆನ್ನೆಗೆ ಸೋಂಕು ಮೆತ್ತಿದ ನೆತ್ತರಿನ ಗುರುತಿನೊಂದಿಗೆ ಬಂದರೆ ಬಂಡವಾಳ ತಲೆಯಿಂದ ಪಾದದವರೆಗೂ ನೆತ್ತರನ್ನು ತೊಟ್ಟಿಕಿಸುತ್ತಾ ಬರುತ್ತದೆ.

ಅಭಿವೃದ್ಧಿಯ ಬೇರುಗಳನ್ನು ಬಂಡವಾಳದಲ್ಲಿ ಕಾಣಬಹುದು ಎಂದು ನಮ್ಮ ಶಾಲೆಗಳ ಪಠ್ಯದಲ್ಲಿ ಹೇಳಲಾಗುತ್ತದೆ. ಆಧುನಿಕ ಮಾನವನ ನಾಗರಿಕತೆಯ ಬೆಳವಣಿಗೆಗೂ ಬಂಡವಾಳವೇ ಮೂಲ ಎಂದು ಭೋಧಿಸಲಾಗುತ್ತದೆ. ಉತ್ಪಾದನೆ ಮತ್ತು ಉದ್ಯೋಗ ಬಂಡವಾಳದಿಂದಲೇ ಹೊರಹೊಮ್ಮುತ್ತದೆ ಎಂದು ಹೇಳಲಾಗುತ್ತದೆ. ಮಾರ್ಕ್ಸ್‌ನ ಅಭಿಪ್ರಾಯದಲ್ಲಿ ಬಂಡವಾಳದ ಮೂಲ ಉದ್ದೇಶ ಎಂದರೆ ಲಾಭ ಗಳಿಕೆ. ಈ ಲಾಭಗಳಿಕೆಯ ಧ್ಯೇಯ ಸಾಧಿಸುವುದೊಂದೇ ಬಂಡವಾಳದ ಉದ್ದೇಶ. ಅದಕ್ಕಾಗಿಯೇ ಅದರ ಅಸ್ತಿತ್ವ. ಲಾಭಾಂಶ ಹೆಚ್ಚಾದಂತೆಲ್ಲಾ ಹೇಗೆ ಬಂಡವಾಳ ತನ್ನ ನಿಜ ಸ್ವರೂಪವನ್ನು ಹೊರಹಾಕುತ್ತದೆ ಎನ್ನುವುದನ್ನು ಮಾರ್ಕ್ಸ್ ತಮ್ಮ ಕಾಲಘಟ್ಟದ ಒಬ್ಬ ಕಾರ್ಮಿಕ ನಾಯಕನ ದೃಷ್ಟಾಂತದ ಮೂಲಕ ಹೇಳುತ್ತಾರೆ. ಶೇ 10ರಷ್ಟು ಲಾಭ ಬಂದರೆ ಬಂಡವಾಳವನ್ನು ಎಲ್ಲಿ ಬೇಕಾದರೂ ಹೂಡಬಹುದು. ಶೇ 20ರಷ್ಟಾದರೆ ಇದು ಕುತೂಹಲ ಹುಟ್ಟಿಸುತ್ತದೆ. ಶೇ 50ರಷ್ಟು ಲಾಭ ಉಂಟಾದರೆ ಸಕಾರಾತ್ಮಕ ಅಹಮಿಕೆ ಉಂಟುಮಾಡುತ್ತದೆ ಶೇ 100 ಲಾಭವಾದರೆ ಎಲ್ಲ ಮಾನವ ನಿಯಮಗಳನ್ನೂ ಮೆಟ್ಟಿ ನಿಲ್ಲುವಂತೆ ಮಾಡುತ್ತದೆ. ಶೇ 300ರಷ್ಟು ಲಾಭವಾದರೆ ಯಾವುದೇ ಅಪರಾಧ ಎಸಗಲು ಸಿದ್ಧವಾಗುತ್ತದೆ, ಯಾವುದೇ ಅಪಾಯವನ್ನು ಎದುರಿಸಲೂ ಸಿದ್ಧವಾಗುತ್ತದೆ. ತಮ್ಮ ಒಡೆಯನನ್ನೇ ನೇಣುಹಾಕಲು ಸಿದ್ಧವಾಗುತ್ತದೆ. ಬಂಡವಾಳದ ಸ್ವರೂಪಗಳು ಬದಲಾಗಿವೆ. ಅದರ ವೇಗ ಇಂದು ವಿದ್ಯುನ್ಮಾನ ವೇಗಕ್ಕೆ ಸಮನಾಗಿದೆ. ಇಡೀ ಜಗತ್ತನ್ನು ತನ್ನದೇ ವೇದಿಕೆ ಎಂದು ಬಂಡವಾಳ ಪರಿಗಣಿಸುತ್ತದೆ. ಯಾವುದೇ ಗಡಿ ರೇಖೆಗಳನ್ನು ಲೆಕ್ಕಿಸದೆ ಮುನ್ನುಗ್ಗುತ್ತದೆ. ಅಮೆರಿಕದ ಅನ್ವೇಷಕ ಥಾಮಸ್ ಆಲ್ವಾ ಎಡಿಸನ್ " ಮೇಧಾವಿ ಎಂದರೆ ಶೇ 1ರಷ್ಟು ಸ್ಫೂರ್ತಿ ಮತ್ತು ಶೇ 99ರಷ್ಟು ಬೆವರು "ಎಂದು ಹೇಳುತಿದ್ದರು. ಈ ಮಾತನ್ನು ಪ್ರಸ್ತುತ ಸನ್ನಿವೇಶಕ್ಕೆ ಸಮೀಕರಿಸಿ ಹೇಳುವುದಾದರೆ ಬಂಡವಾಳದ ವಹಿವಾಟು ಶೇ 1ರಷ್ಟು ಉತ್ಪಾದನೆಯಾದರೆ ಶೇ 99ರಷ್ಟು ಸಟ್ಟಾ ವ್ಯಾಪಾರವಾಗಿರುತ್ತದೆ. ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳುವಾಗ ಬಂಡವಾಳ ಶ್ರಮ ಶಕ್ತಿಯ ಮುಖಾಂತರ ಹೆಚ್ಚುವರಿ ಮೌಲ್ಯವನ್ನು ಹೊರತೆಗೆಯುತ್ತದೆ ಮತ್ತು ನೈಜ ಉತ್ಪಾದನಾ ಪ್ರಕ್ರಿಯೆಯಿಂದ ದೂರದಲ್ಲಿದ್ದುಕೊಂಡೇ ಸಟ್ಟಾ ವ್ಯಾಪಾರದ ಮೂಲಕ ನೀರಿನ ಗುಳ್ಳೆಗಳನ್ನು ಸೃಷ್ಟಿಸುತ್ತಾ ಹೋಗುತ್ತದೆ. ಈ ನೀರಿನ ಗುಳ್ಳೆಗಳು ಆಗಾಗ್ಗೆ ಒಡೆದುಹೋಗುವುದರಿಂದ ಜಾಗತೀಕರಣಗೊಂಡ ಆರ್ಥಿಕತೆ ಇನ್ನೂ ಹೆಚ್ಚು ಗಂಭೀರ ಬಿಕ್ಕಟ್ಟಿಗೆ ಒಳಗಾಗುತ್ತಲೇ ಇರುತ್ತದೆ.

ಬಂಡವಾಳದ ಅಂತಃಸತ್ವ ಇರುವುದು ಹಣ ಅಥವಾ ಯಂತ್ರದಲ್ಲಿ ಅಲ್ಲ ಎಂದು ಮಾರ್ಕ್ಸ್ ಹೇಳುತ್ತಾರೆ. ಬದಲಾಗಿ ಬಂಡವಾಳದ ಸತ್ವ ಇರುವುದು ಸಾಮಾಜಿಕ ಶಕ್ತಿಯಲ್ಲಿ. ಈ ಸಾಮಾಜಿಕ ಶಕ್ತಿಯ ಮೂಲಕ ಬಂಡವಾಳ ಇದ್ದವರು ದುಡಿಯುವುದಿಲ್ಲ ಬಂಡವಾಳದಿಂದ ವಂಚಿತರಾದವರು ತಮ್ಮ ಶ್ರಮ ಶಕ್ತಿಯನ್ನು ವಿನಿಯೋಗಿಸುವುದು ಅನಿವಾರ್ಯವಾಗುತ್ತದೆ. ತಮ್ಮ ಜೀವನ ನಿರ್ವಹಣೆಗಾಗಿ ದೈಹಿಕ ಅಥವಾ ಮಾನಸಿಕ ಶ್ರಮವನ್ನು ವ್ಯಯ ಮಾಡಬೇಕಾಗುತ್ತದೆ. ಬಂಡವಾಳದ ಈ ನಿಯಮವನ್ನು ಪ್ರಭುತ್ವ ಜಾರಿಗೊಳಿಸುತ್ತದೆ. ಬಂಡವಾಳದಂತೆಯೇ ಪ್ರಭುತ್ವವೂ ಸಹ ಸಾಮಾಜಿಕ ಸಂರಚನೆಯೇ ಆಗಿರುತ್ತದೆ. ಈ ಬಂಡವಾಳ ಮತ್ತು ಪ್ರಭುತ್ವವನ್ನು ಮೀರಿ ಮುನ್ನಡೆಯುವ ಸಾಮಾಜಿಕ ಸಂರಚನೆಯನ್ನು ಊಹಿಸುವಂತೆಯೇ ಸಾಧಿಸಲೂ ಸಾಧ್ಯ. ಇಲ್ಲಿ ಸಮಾಜ ಮುಕ್ತ ಉತ್ಪಾದಕರ ಸಂಘಟನೆಯಾಗಿರುತ್ತದೆ ಅಥವಾ ಮುಕ್ತ ಸಂಘಟನೆಯುಳ್ಳ ವ್ಯಕ್ತಿಗಳ ಸಮುದಾಯವಾಗಿರುತ್ತದೆ. ಎಲ್ಲರ ಮುಕ್ತ ಅಭಿವೃದ್ಧಿಗೆ ಪ್ರತಿಯೊಬ್ಬರ ಮುಕ್ತ ಅಭಿವೃದ್ಧಿಯೇ ಮೂಲ ಷರತ್ತೂ ಆಗಿರುತ್ತದೆ. ಇದು ಮಾರ್ಕ್ಸ್ ದೃಷ್ಟಿಕೋನದ ಕಮ್ಯುನಿಸಂ ಆಗಿರುತ್ತದೆ. ಈ ಸಮಾಜದಲ್ಲಿ ಪ್ರತಿಯೊಬ್ಬರೂ ಅವರ ಸಾಮರ್ಥ್ಯಕ್ಕನುಗುಣವಾಗಿ ಕೊಡುಗೆ ಶ್ರಮ ವಹಿಸುತ್ತಾರೆ ಹಾಗೆಯೇ ಅವರ ಅವಶ್ಯಕತೆಗನುಗುಣವಾಗಿ ಪಡೆಯುತ್ತಾರೆ.

ಬಂಡವಾಳ ಮತ್ತು ಬಂಡವಾಳ ವ್ಯವಸ್ಥೆಯನ್ನು ಮೀರಿ ಮುನ್ನಡೆಯುವ ಸಮಾಜ ನಿರ್ಮಾಣಕ್ಕಾಗಿ ಹೋರಾಡಲು ಮಾರ್ಕ್ಸ್ ನಮಗೆ ಸ್ಫೂರ್ತಿ ನೀಡುತ್ತಾರೆ. ಇದನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ಕೃಷಿ ಉತ್ಪಾದನೆಯೇ ಪ್ರಧಾನವಾಗಿರುವ ಒಂದು ಕೃಷಿ ಅಧಾರಿತ ಸಮಾಜದ ಉದಾಹರಣೆಯನ್ನು ತೆಗೆದುಕೊಳ್ಳೋಣ. ಕೃಷಿಯಲ್ಲಿ ತೊಡಗಿಸಿಕೊಳ್ಳಲು ನಮಗೇನು ಬೇಕು ? ವ್ಯವಸಾಯ ಯೋಗ್ಯ ಭೂಮಿ, ಕೃಷಿ ಸಲಕರಣೆಗಳು ಮತ್ತು ಉಪಕರಣಗಳು, ವ್ಯವಸಾಯ ತಂತ್ರಜ್ಞಾನ ಮತ್ತು ಶ್ರಮ. ಶ್ರಮವನ್ನು ರೈತನೇ ವಹಿಸಲಿ ಅಥವಾ ಕೃಷಿ ಕಾರ್ಮಿಕನೇ ವಹಿಸಲಿ ಶ್ರಮವಂತೂ ಅತ್ಯವಶ್ಯ. ಆದರೆ ಕೃಷಿ ಉತ್ಪಾದನೆಗೆ

ನೂರಾರು ಎಕರೆ ಭೂಮಿಯ ಒಡೆತನವುಳ್ಳ ಭೂಮಾಲಿಕನ ಅವಶ್ಯಕತೆ ಇದೆಯೇ ? ಭೂಮಾಲೀಕತ್ವವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿರುವ ಇಂದಿನ ಪರಿಸ್ಥಿತಿಯಲ್ಲಿ ಇದು ಅನವಶ್ಯ. ನಮಗೆ ತಿಳಿದಿರುವಂತೆ ಭೂಮಾಲೀಕತ್ವದ ನಿಷೇಧದ ನಂತರ ಕೃಷಿ ಅಭಿವೃದ್ಧಿ ಹೆಚ್ಚಾಗಿದೆ. ಕೃಷಿ ಆರ್ಥಿಕತೆಯ ಸಂದರ್ಭದಲ್ಲಿ ಭೂಮಾಲೀಕ ಅನಗತ್ಯ ಎಂದಾದಲ್ಲಿ ಕೈಗಾರಿಕಾ ಉತ್ಪಾದನೆಯನ್ನು ಅವಲಂಬಿಸಿದ ಆಧುನಿಕ ಅರ್ಥವ್ಯವಸ್ಥೆಗೆ, ವಿವಿಧ ಸೇವೆಗಳಿಗೆ ಮತ್ತು ವಿಶೇಷ ಜ್ಞಾನಶಾಖೆಗಳಿಗೆ ಬಂಡವಾಳಿಗರ ಅವಶ್ಯಕತೆ ಇದೆಯೇ ? ಬಂಡವಾಳದ ಖಾಸಗಿ ಒಡೆಯನ ಅಗತ್ಯತೆ ಇದೆಯೇ ? ಇಲ್ಲಿ ಉತ್ತರ ಖಚಿತವಾಗಿಯೂ ಇಲ್ಲ ಎಂದೇ ಹೇಳಬಹುದು. ನಮಗೆ ಕಾರ್ಖಾನೆಗಳು, ಕಾರ್ಯಕ್ಷೇತ್ರಗಳು ಬೇಕು, ಯಂತ್ರಗಳು, ತಂತ್ರಜ್ಞಾನಗಳು ಬೇಕು, ಪರಸ್ಪರ ಹೊಂದಾಣಿಕೆಯಿಂದ ಕೆಲಸ ಮಾಡುವ ಕಾರ್ಮಿಕರು ಬೇಕು, ವಿಜ್ಞಾನಿಗಳು, ಇಂಜಿನಿಯರುಗಳು, ಪರಿವೀಕ್ಷಕರು ಬೇಕು, ಉತ್ಪಾದನಾ ಗುಣಮಟ್ಟವನ್ನು ನಿಯಂತ್ರಿಸುವ ತಜ್ಞರು ಬೇಕು, ದುಡಿಮೆ ಮತ್ತು ಕಾರ್ಮಿಕರನ್ನು ನಿರ್ವಹಿಸುವ ಹಾಗೂ ಸಂಘಟಿವು ವಿಧಾನಗಳು ಬೇಕು. ಒಂದು ವಾಣಿಜ್ಯ ಸಾಮ್ರಾಜ್ಯವನ್ನು ವಂಶಪಾರಂಪರ್ಯವಾಗಿ ಪಡೆದುಕೊಂಡು ಒಡೆತನವನ್ನು ಸ್ಥಾಪಿಸುವ ವ್ಯಕ್ತಿ ನಮಗೆ ಬೇಕಿಲ್ಲ. ಇದು ಪ್ರತಿಯೊಂದು ಅವಶ್ಯಕ ವಿಚಾರಗಳಲ್ಲೂ ಪಾರಮ್ಯ ಮೆರೆಯುವ ಪರಾವಲಂಬಿಯಾಗಿ ಈ ಒಡೆಯರು ನಡೆದುಕೊಳ್ಳುತ್ತಾರೆ. ಹಾಗೆಯೇ ಉತ್ಪಾದನೆಯ ಪ್ರತಿಯೊಂದು ಹಂತ ಮತ್ತು ಪ್ರತಿಯೊಂದು ವಿಭಾಗದ ಮೇಲೂ, ಇಡೀ ಅರ್ಥವ್ಯವಸ್ಥೆಯ ಮೇಲೂ ಪಾರಮ್ಯ ಹೊಂದುತ್ತಾರೆ. ಶ್ರಮದ ಸಮಾಜೀಕರಣವನ್ನು ವಿತರಣೆಯ ಸಮಾಜೀಕರಣದೊಡನೆ ಸಮೀಕರಿಸಿ ನೋಡಿದಾಗ ಒಡೆತನ ಮತ್ತು ಬಂಡವಾಳವಾದ ಬೇರುಗಳು ಸಡಿಲವಾಗುತ್ತವೆ. ಮಾನವೀಯತೆಯನ್ನೇ ಅಳಿಸಿ ಹಾಕುವ ಬಂಡವಾಳದ ಅಧಿಪತ್ಯದಿಂದ ಸಂಪೂರ್ಣ ಸ್ವಾತಂತ್ರ್ಯವನ್ನು ಒದಗಿಸುವ ಕಮ್ಯುನಿಸ್ಟ್ ಸಿದ್ಧಾಂತಕ್ಕೆ ಸಾಗುವ ಪಯಣದಲ್ಲಿ ಹಲವಾರು ಸಣ್ಣ ಹಾಗೂ ಬೃಹತ್ ಪ್ರಮಾಣದ ಬದಲಾವಣೆಗಳು ಉಂಟಾಗುತ್ತಲೇ ಇರುತ್ತವೆ. ಪುಟ್ಟ ಹೆಜ್ಜೆ ಗುರುತುಗಳೊಂದಿಗೆ ಭಾರಿ ಪ್ರಮಾಣದ ಮುನ್ನಡೆಗಳು ಸಾಧ್ಯವಾಗುತ್ತವೆ. ಸುಧಾರಣೆ ಮತ್ತು ಕ್ರಾಂತಿ ಸಾಧ್ಯವಾಗುತ್ತದೆ. ಈ ಸಂದರ್ಭದಲ್ಲೇ ಮಾರ್ಕ್ಸ್ ವರ್ಗ ಸಂಘರ್ಷವನ್ನು ಕುರಿತು ಪ್ರಸ್ತಾಪಿಸುತ್ತಾರೆ. ಇದು ಮಾರ್ಕ್ಸ್‌ನ ಕ್ರಾಂತಿಕಾರಿ ತತ್ವ ಮತ್ತು ಆಚರಣೆಯ ಮೂಲ ಪ್ರೇರಕ ಶಕ್ತಿಯೂ ಆಗಿದೆ. ಹಾಗಾಗಿ ವರ್ಗ ಸರ್ಂಘರ್ಷ ಎನ್ನುವುದು ವರ್ಗ ಆಧಾರಿತ ಅಧಿಪತ್ಯ ಮತ್ತು ವರ್ಗ ವಿಂಗಡಿತ ಸಮಾಜದ ಉಗಮದೊಂದಿಗೇ ಆರಂಭವಾದ ವಿದ್ಯಮಾನವಾಗಿದ್ದು ಇದನ್ನು ಅವಿಷ್ಕಾರ ಮಾಡಿದ್ದು ತಾನೇ ಎಂದು ಮಾರ್ಕ್ಸ್ ಎಲ್ಲಿಯೂ ಹೇಳುವುದಿಲ್ಲ. ಮಾರ್ಕ್ಸ್ ಐತಿಹಾಸಿಕ ಕೊಡುಗೆ ಎಂದರೆ ವರ್ಗ ಸಂಘರ್ಷದ ಪ್ರೇರಕ ಶಕ್ತಿಯನ್ನು ಕಮ್ಯುನಿಸಂನೊಡನೆ ಸಮೀಕರಿಸುವುದು.

ಮಾರ್ಕ್ಸ್ ವರ್ಗ ಸಂಘರ್ಷವನ್ನು ಕುರಿತು ಮಾತನಾಡುವಾಗ ಒಂದು ನಿರ್ದಿಷ್ಟ ಹಿತಾಸಕ್ತಿಗಾಗಿ ಅಥವಾ ತತ್ ಕ್ಷಣದ ಸನ್ನಿವೇಶದ ನೆಲೆಯಲ್ಲಿ ಎರಡು ವಿರುದ್ಧ ಬಣಗಳ ನಡುವಿನ ಸಂಘರ್ಷ ಎಂದು ವ್ಯಾಖ್ಯಾನಿಸುವುದಿಲ್ಲ. ಇದು ವರ್ಗ ಸಂಘರ್ಷದ ಮೊದಲ ಹೆಜ್ಜೆ ಮಾತ್ರ. ಕಾರ್ಮಿಕನು ಈ ಮೊದಲ ಹೆಜ್ಜೆಯನ್ನು ನೋಡುತ್ತಾ, ಸ್ವೀಕರಿಸುತ್ತಾ ಸ್ವಯಂ ಉತ್ಸುಕತೆಯಿಂದ ಕಲಿಯುತ್ತಾ ಮುನ್ನಡೆಯುತ್ತಾರೆ. ಶ್ರಮ ಮತ್ತು ಬಂಡವಾಳದ ನಡುವಿನ ನಡೆಯುವ ನಿರಂತರ ಹೋರಾಟದಲ್ಲಿ ಕಾರ್ಮಿಕ ಸಂಘಟನೆಗಳು ಉಗಮಿಸುವ ಹಿನ್ನೆಲೆಯಲ್ಲಿ ಕಾರ್ಮಿಕನು ಮುನ್ನಡೆಯುತ್ತಾರೆ. ಮಾರ್ಕ್ಸ್ ವರ್ಗ ಸಂಘರ್ಷವನ್ನು ಸಾಮಾಜಿಕ ಪರಿವರ್ತನೆಯ ಅಸ್ತ್ರ ಎಂದೇ ಪರಿಗಣಿಸುತ್ತಾರೆ. ವರ್ಗ ಅಧಿಪತ್ಯದ ರಹಸ್ಯವನ್ನು ಭೇಧಿಸುವ ಮಾರ್ಕ್ಸ್ ವರ್ಗ ಸಂಘರ್ಷದ ಮೂಲಕ ಇದನ್ನು ಎದುರಿಸುವುದೇ ಅಲ್ಲದೆ ಜಾರಿಯಲ್ಲಿರುವ ವರ್ಗ ಆಳ್ವಿಕೆಯನ್ನು ಸಂಪೂರ್ಣವಾಗಿ ಕಿತ್ತೊಗೆಯಲು ಮಾರ್ಗಗಳನ್ನು ತೋರುತ್ತಾರೆ. ವರ್ಗ ಆಳ್ವಿಕೆಯನ್ನು ಕುರಿತು ಮಾತನಾಡುವಾಗ ನಾವು ಮುಖ್ಯವಾಗಿ ಬಂಡವಾಳ ಮತ್ತು ಪ್ರಭುತ್ವ ಎಂಬ ಎರಡು ಸ್ತಂಭಗಳನ್ನು ಕುರಿತು ಪ್ರಸ್ತಾಪಿಸುತ್ತೇವೆ. ಕೆಲವೇ ಜನರ ಬಳಿ ಬಂಡವಾಳದ ಕ್ರೋಢೀಕರಣವಾಗುವುದು ತತ್ಪರಿಣಾಮವಾಗಿ ಬಂಡವಾಳ ವ್ಯವಸ್ಥೆಯ ಸಮಾಜಗಳಲ್ಲಿ ಅಸಮಾನತೆ ಹೆಚ್ಚಾಗುವುದು ನಾವು ಇತಿಹಾಸದಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾದ ವಿದ್ಯಮಾನಗಳು. ಇತ್ತೀಚೆಗೆ ನಡೆದ ವಾಲ್ ಸ್ಟ್ರೀಟ್ ಚಳುವಳಿಯಲ್ಲಿ ಅವಕಾಶವಂಚಿತ ಶೇ 99ರಷ್ಟು ಜನರು ಶೇ 1ರಷ್ಟಿರುವ ಉಳ್ಳವರ ಸವಲತ್ತುಗಳು ಮತ್ತು ಶಕ್ತಿಯ ವಿರುದ್ಧ ನಡೆದ ಸಂಘರ್ಷವನ್ನು ಕಾಣಬಹುದು. ಬ್ರಿಟನ್ನಿನಲ್ಲಿ ಕಾರ್ಬಿನ್ ಅಭಿಯಾನದ ಮೂಲಕ ಅನೇಕರಿಗಾಗಿ

ಹಲವರಿಗಾಗಿ ಅಲ್ಲ ಎಂಬ ಘೋಷಣೆ ಇದೇ ಸಂದೇಶವನ್ನು ಸಾರಿತ್ತು. ಉಸಿರಾಡಲು ಶುದ್ಧ ಗಾಳಿ, ಕುಡಿಯಲು ಯೋಗ್ಯವಾದ ನೀರು ಪಡೆಯುವ ಸಲುವಾಗಿ ಪರಿಸರ ಮಾಲಿನ್ಯ ಉಂಟುಮಾಡುವ ಕಾರ್ಖಾನೆಯನ್ನು ಮುಚ್ಚುವಂತೆ ಆಗ್ರಹಿಸುವ ನಿಶ್ಯಸ್ತ್ರಧಾರಿ ಪ್ರತಿಭಟನಾಕಾರರ ಮೇಲೆ ಪ್ರಭುತ್ವ ಅಸ್ತ್ರ ಪ್ರಯೋಗ ಮಾಡಿದಾಗ ಪ್ರಬಲ ವರ್ಗಗಳ ಏಜೆಂಟರಂತೆ ಕಾರ್ಯ ನಿರ್ವಹಿಸುವ ಪ್ರಭುತ್ವದ ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುತ್ತದೆ.

ನಾವು ಮಾರ್ಕ್ಸ್‌ನನ್ನು ಗಂಭೀರವಾಗಿ ಅಧ್ಯಯನ ಮಾಡಿದಾಗ ಮೂರನೆಯ ಸ್ತಂಭವೊಂದರ ಬಗ್ಗೆ ನಮ್ಮ ಗಮನ ಸೆಳೆಯುವುದನ್ನು ಕಾಣಬಹುದು. ಅದು ಚಿಂತನೆಯ ವೇದಿಕೆ. ಪ್ರತಿಯೊಂದು ಯುಗದಲ್ಲೂ ಆಳುವ ವರ್ಗಗಳ ಚಿಂತನೆಗಳು ಆಳುವವರ ಚಿಂತನೆಗಳೇ ಆಗಿರುತ್ತದೆ ಎಂದು ಮಾರ್ಕ್ಸ್ ಹೇಳುತ್ತಾರೆ. ಅಂದರೆ, ಆಳುವ ವರ್ಗಗಳು ತಮ್ಮ ಆಳ್ವಿಕೆಯನ್ನು ಚಿಂತನೆಗಳ ಚೌಕಟ್ಟಿನಲ್ಲಿ ಸಮರ್ಥಿಸಿಕೊಳ್ಳುತ್ತಾರೆ. ಚೋಮ್ಸ್ಕಿ ಇದನ್ನು ಸಮ್ಮತಿಯ ತಯಾರಿಕೆ ಎಂದು ಬಣ್ಣಿಸುತ್ತಾರೆ. ಪ್ರಬಲ ವರ್ಗಗಳ ಆಳ್ವಿಕೆಯನ್ನು ಕೊನೆಗೊಳಿಸಿ ಕಿತ್ತೊಗೆಯುವ ನಿಟ್ಟಿನಲ್ಲಿ ಎಲ್ಲ ಆಯಾಮಗಳಲ್ಲೂ ಹೋರಾಟಗಳನ್ನು ರೂಪಿಸಬೇಕಾಗುತ್ತದೆ. ಆರ್ಥಿಕ ನಿಯಂತ್ರಣದ ವಿರುದ್ಧ, ರಾಜಕೀಯ ನಿಯಂತ್ರಣದ ವಿರುದ್ಧ ಮತ್ತು ಸೈದ್ಧಾಂತಿಕ ನಿಯಂತ್ರಣದ ವಿರುದ್ಧ ಹೋರಾಟ ರೂಪಿಸಬೇಕಾಗುತ್ತದೆ. ಮಾರ್ಕ್ಸ್ ಭಾರತದ ಸಂದರ್ಭದಲ್ಲಿ ಅಪ್ರಸ್ತುತ ಎಂದು ಅನೇಕರು ಭಾವಿಸಲು ಮುಖ್ಯ ಕಾರಣ ಎಂದರೆ ಭಾರತದ ಪ್ರಧಾನ ಜಾತಿ ಮತ್ತು ಧರ್ಮ ವರ್ಗ ಸಂಘರ್ಷದ ಈ ಮಹತ್ವದ ಆಯಾಮವನ್ನು ಗುರುತಿಸುವುದಿಲ್ಲ.

ಭಾರತದಲ್ಲಿನ ಪ್ರಧಾನ ಚಿಂತನೆಗಳೇನು ? ನಾವು ಸುಲಭವಾಗಿ ಕಾಣಬಹುದಾದ ಅಂಶವೆಂದರೆ ಇಲ್ಲಿನ ಪ್ರಧಾನ ಚಿಂತನೆಗಳು ಪರಿವರ್ತನೆ ಮತ್ತು ಸಾಮಾಜಿಕ ಚಲನೆಯ ವಿರುದ್ಧವೇ ಇರುತ್ತವೆ. ಎಲ್ಲವೂ ವಿಧಿಯ ಪೂರ್ವ ನಿರ್ಧರಿತ ತೀರ್ಮಾನದಂತೆಯೇ ನಡೆಯುತ್ತದೆ, ನಿಮಗೆ ಜೀವನದಲ್ಲಿ ಏನು ಲಭಿಸುತ್ತದೆ ಎಂದು ಚಿಂತಿಸಬೇಕಿಲ್ಲ ಏಕೆಂದರೆ ಸರಿಯಾದ ಸಮಯದಲ್ಲಿ, ಸರಿಯಾದ ಪ್ರಮಾಣದಲ್ಲ, ಸರಿಯಾದುದನ್ನೇ ಪಡೆಯುತ್ತೀರಿ ಎನ್ನುವ ಚಿಂತನೆ ನಮ್ಮ ಸಮಾಜವನ್ನು ಆವರಿಸಿದೆ. ನಾವು ಜೀವನದಲ್ಲಿ ಪಡೆಯುವುದೆಲ್ಲವೂ ನಮ್ಮ ಪೂರ್ವ ಜನ್ಮದ ಕರ್ಮದ ಫಲ ಎಂದು ಹೇಳಲಾಗುತ್ತದೆ. ಈ ಜನ್ಮದಲ್ಲಿ ನಾವು ಮಾಡುವ ಉತ್ತಮ ಕೆಲಸಗಳೇ ಮುಂದಿನ ಜನ್ಮದಲ್ಲಿ ನಮಗೆ ಒಳ್ಳೆಯದು ಮಾಡುತ್ತವೆ ಎಂದು ಹೇಳಲಾಗುತ್ತದೆ. ನಾವು ಮಾಡುವ ಕೆಲಸಕ್ಕೆ ಯಾವುದೇ ಪ್ರತಿಫಲ ಅಥವಾ ಬಹುಮಾನವನ್ನು ನಿರೀಕ್ಷಿಸದೆ ಇರುವಂತೆ ಪ್ರಚೋದಿಸಲಾಗುತ್ತದೆ. ಜೀವನದಲ್ಲಿ ಪ್ರತಿಯೊಬ್ಬ ಹಿಂದೂವಿನ ಸ್ಥಾನ ಮಾನಗಳನ್ನು ಅವರು ಹುಟ್ಟಿದ ಜಾತಿ ನಿರ್ಧರಿಸುತ್ತದೆ ಎಂದು ಹೇಳಲಾಗುತ್ತದೆ. ಈ ಜಾತಿ ಎನ್ನುವುದು ದೈವದತ್ತವಾದ ಸಂಸ್ಥೆಯಾಗಿದ್ದು ಇದನ್ನು ಮೀರಿ ನಿಲ್ಲಬಾರದು ಎಂದು ಭೋಧಿಸಲಾಗುತ್ತದೆ. ಮಹಿಳೆಯರು ಸದಾ ಪುರುಷರಿಗಿಂತಲೂ ಕೀಳು ಎಂದು ಅವರಲ್ಲಿಯೇ ನಂಬಿಕೆ ಹುಟ್ಟಿಸಲಾಗುತ್ತದೆ. ತಮ್ಮ ಜೀವನವಿಡೀ ತಮ್ಮ ಸಮುದಾಯದ , ಜಾತಿಯ, ಕುಟುಂಬದ ಚೌಕಟ್ಟಿನ ಒಳಗೇ ಪುರುಷರ ಸೇವೆ ಮಾಡುವುದೇ ಮಹಿಳೆಯರ ಧರ್ಮ ಎಂದು ಉಪದೇಶಿಸಲಾಗುತ್ತದೆ. ಮಹಿಳೆಯರ ತ್ಯಾಗ ಮತ್ತು ಮೌನವನ್ನು ವೈಭವೀಕರಿಸಿ ಅವರ ಹಕ್ಕು ಪ್ರತಿಪಾದನೆಯನ್ನು ನಿಷೇಧಿಸಲಾಗುತ್ತದೆ ಅಥವಾ ಶಿಕ್ಷಿಸಲಾಗುತ್ತದೆ. ಈ ಪ್ರತಿಗಾಮಿ ಚಿಂತನೆಗಳನ್ನು ಧರ್ಮ ಸಂಹಿತೆಯ ರೂಪದಲ್ಲಿ ಕ್ರೋಢೀಕರಿಸಿರುವ ಮನುಸ್ಮೃತಿ ಅತ್ಯಂತ ಕ್ರೂರ ಧರ್ಮ ಗ್ರಂಥವಾಗಿದ್ದು ಇದು ಮತ್ತು ಇತರ ಬ್ರಾಹ್ಮಣ್ಯದ ಗ್ರಂಥಗಳು ಸ್ತ್ರೀವಿರೋಧ, ಅಸ್ಪೃಶ್ಯತೆ ಹಾಗೂ ಸಾಮಾಜಿಕ ಗುಲಾಮಗಿರಿಗೆ ಆಕರಗಳಾಗಿ ಪರಿಣಮಿಸಿವೆ.

ಹಾಗಾಗಿ ಭಾರತದಲ್ಲಿ ಯಾವುದೇ ಮಾರ್ಕ್ಸ್‌ನ ತತ್ವಗಳು ಮತ್ತು ವರ್ಗ ಸಂಘರ್ಷದ ಆಚರಣೆಗಳು ಎಲ್ಲ ಪ್ರಬಲ, ಬೇರೂರಿದ ಚಿಂತನೆಗಳ ವಿರುದ್ಧ ಹೂಡುವ ಸಂಘರ್ಷಗಳಾಗಿ ಪರಿಣಮಿಸುತ್ತವೆ. ಈ ಬೇರೂರಿದ ಚಿಂತನೆಗಳು ಯಥಾಸ್ಥಿತಿಯನ್ನು ಸಮರ್ಥಿಸುವುದೇ ಅಲ್ಲದೆ ಯಾವುದೇ ರೀತಿಯ ಸಾಮಾಜಿಕ ಪರಿವರ್ತನೆ ಮತ್ತು ಚಲನಶೀಲತೆಯನ್ನು ಚಿವುಟಿ ಹಾಕುತ್ತವೆ. ಈ ದೃಷ್ಟಿಕೋನದಿಂದ ನೋಡಿದಾಗ ವರ್ಗ ಮತ್ತು ಜಾತಿಯ ನಡುವೆ ಚೀನಾದ ಗೋಡೆಯಂತಹ ಬೃಹತ್ ಅಡ್ಡಿಯೇನೂ ಕಾಣುವುದಿಲ್ಲ. ಮಾರ್ಕ್ಸ್ ಫುಲೆ ಅವರ ಬಗ್ಗೆ ಕೇಳ್ಪಟ್ಟಿದ್ದರೋ ಇಲ್ಲವೋ ಅಥವಾ ಫುಲೆ ಮಾರ್ಕ್ಸ್ ಕುರಿತು ಕೇಳ್ಪಟ್ಟಿದ್ದರೋ ಇಲ್ಲವೋ ಅದು ಅಪ್ರಸ್ತುತ ಆದರೆ 1873ರಲ್ಲೇ ಫುಲೆ ಭಾರತೀಯ ಸಮಾಜದಲ್ಲಿ ಅಂತರ್ಗತವಾಗಿದ್ದ ಜಾತಿ ಮತ್ತು

ಲಿಂಗಾಧಾರಿತ ಸಾಮಾಜಿಕ ಗುಲಾಮಗಿರಿಯನ್ನು ಕುರಿತು ಬರೆದಿದ್ದುದನ್ನು ಗಮನಿಸಿದಾಗ ಸೈದ್ಧಾಂತಿಕ ನೆಲೆಯಲ್ಲಿ ವರ್ಗ ಸಂಘರ್ಷದ ಬಗ್ಗೆ ಮಹತ್ತರ ಕೊಡುಗೆ ನೀಡಿರುವುದು ಗಮನ ಸೆಳೆಯುತ್ತದೆ. ಅಂಬೇಡ್ಕರ್ ಮಾರ್ಕ್ಸ್‌ನ ಚಿಂತನೆಗಳ ಬಗ್ಗೆ ಎಷ್ಟು ಸಹಮತ ಹೊಂದಿದ್ದರು ಎನ್ನುವುದು ಅಪ್ರಸ್ತುತ. ಆದರೆ 1936ರಲ್ಲಿ ಜಾತಿ ವಿನಾಶಕ್ಕಾಗಿ ಅಂಬೇಡ್ಕರ್ ನೀಡಿದ ಮಹತ್ತರ ಕರೆಯನ್ನು ಭಾರತದಲ್ಲಿ ವರ್ಗ ಸಂಘರ್ಷದ ಪ್ರಮುಖ ಘಟ್ಟ ಎಂದು ಗುರುತಿಸಬೇಕಾಗುತ್ತದೆ. ಜಾತಿ ಎನ್ನುವುದು ಶ್ರಮ ವಿಭಜನೆಯ ವಿದ್ಯಮಾನವಲ್ಲ ಬದಲಾಗಿ ಶ್ರಮಿಕರ ವಿಭಜನೆಯ ವಿದ್ಯಮಾನ ಎಂದು ಹೇಳುವ ಮೂಲಕ ಅಂಬೇಡ್ಕರ್ ಕಾರ್ಮಿಕರನ್ನು ಒಂದು ವರ್ಗದ ರೂಪದಲ್ಲಿ ಜಾತಿ ವಿರೋಧಿ ನೆಲೆಯಲ್ಲಿ ಐಕಮತ್ಯ ಸಾಧಿಸಲು ಪ್ರೇರೇಪಿಸುತ್ತಾರೆ. ಭಾರತದ ವರ್ಗ ಧೃವೀಕರಣದ ಪ್ರಕ್ರಿಯೆಯಲ್ಲಿ ಜಾತಿ ವಿನಾಶ ಒಂದು ಅತ್ಯವಶ್ಯವಾದ ಮತ್ತು ತೀವ್ರತೆರನಾದ ಹೆಜ್ಜೆಯಾಗಿ ಪರಿಣಮಿಸುತ್ತದೆ. ಸಮಾಜದ ಅತ್ಯಂತ ಕೆಳಸ್ತರದ ಸಮುದಾಯವಾದ ಶ್ರಮಜೀವಿಗಳು ಉಮಗವಾಗುವ ಪ್ರಕ್ರಿಯೆಯನ್ನು ಕಮ್ಯುನಿಸ್ಟ್ ಪ್ರಣಾಳಿಕೆಯಲ್ಲಿ ಅಧಿಕೃತ ಸಮಾಜದ ಮೇಲುಗೈ ಸಾಧಿಸಿದ ಒಂದು ವರ್ಗ ಏಕ್‌ದಂ ಗಾಳಿಯಲ್ಲಿ ಚಿಮ್ಮಿದಂತಹ ಪ್ರಕ್ರಿಯೆಗೆ ಹೋಲಿಸಲಾಗಿದೆ. ಜಾತಿ ಶ್ರೇಣಿ ಮತ್ತು ಪಿತೃಪ್ರಧಾನ ವ್ಯವಸ್ಥೆಯು ಭಾರತದ ಅಧಿಕೃತ ಸಮಾಜದ ಮುಖ್ಯ ಧಾರೆಗಳಾಗಿದ್ದು ಈ ಸಮಸ್ತ ವ್ಯವಸ್ಥೆಗೆ ನಿರ್ಣಾಯಕ ಪೆಟ್ಟು ನೀಡುವ ರೀತಿಯಲ್ಲಿ ಭಾರತದ ಶ್ರಮಜೀವಿಗಳು ಮುನ್ನಡೆಯಬೇಕಾಗುತ್ತದೆ.

ಕಮುನಿಸ್ಟ್ ಪ್ರಣಾಳಿಕೆಯಲ್ಲಿ ಮಾರ್ಕ್ಸ್ ಮತ್ತು ಏಂಗೆಲ್ಸ್, ಪ್ರಜಾತಂತ್ರಕ್ಕಾಗಿ ಹೋರಾಡಿ ತಮ್ಮದೇ ಆದ ರಾಷ್ಟ್ರವನ್ನು ರೂಪಿಸಿಕೊಳ್ಳಲು ದುಡಿಯುವ ವರ್ಗಗಳಿಗೆ ಹೊಣೆಗಾರಿಕೆಯನ್ನು ಹೊರಿಸಿದ್ದಾರೆ. ವರ್ಗ ವಿಭಜಿತ ಸಮಾಜವೊಂದರಲ್ಲಿ ಪ್ರಧಾನವಾದ ಅಥವಾ ಆಳುವ ವರ್ಗಗಳಾಗಿ ಹೊರಹೊಮ್ಮಲು ದುಡಿಯುವ ವರ್ಗಗಳಿಗೆ ಇದು ಅತ್ಯಂತ ಮಹತ್ತರವಾದ ಹೆಜ್ಜೆಯಾಗುತ್ತದೆ. ಇಂದು ಭಾರತದಲ್ಲಿ ಬಂಡವಾಳದ ವರ್ಗ ಆಳ್ವಿಕೆಯ ನಿರಂತರ ಪಯಣವನ್ನು ಕಾಣುತ್ತಿರುವುದೇ ಅಲ್ಲದೆ ಬಂಡವಾಳ ವ್ಯವಸ್ಥೆಯ ಸ್ನೇಹಿ ಮತ್ತು ಸಾಮ್ರಾಜ್ಯಶಾಹಿಯ ಗುಲಾಮಗಿರಿಯ ಸಮೀಕರಣವನ್ನು ಫ್ಯಾಸಿಸ್ಟ್ ಆಡಳಿತ ವ್ಯವಸ್ಥೆಯ ರೂಪದಲ್ಲಿ ಕಾಣುತ್ತಿದ್ದೇವೆ. ಆಕ್ರಮಣಕಾರಿ ಬಹುಸಂಖ್ಯಾವಾದ, ಜಾತಿ ಮತ್ತು ಲಿಂಗ ದೌರ್ಜನ್ಯ ಮತ್ತು ದಮನಕಾರಿ ಆಡಳಿತವನ್ನು ಕಾಣುತ್ತಿದ್ದೇವೆ. ಭಾರತದ ಸಂವಿಧಾನವನ್ನು ದಿನನಿತ್ಯ ಅಪಮೌಲ್ಯಗೊಳಿಸಲಾಗುತ್ತಿದೆ, ಗುಂಪು ಥಳಿತ ಸರ್ವೇ ಸಾಮಾನ್ಯವಾಗುತ್ತಿದೆ, ಈ ಪುಂಡ ಗುಂಪುಗಳನ್ನು ಆಡಳಿತಾರೂಢ ಪಕ್ಷ ಮತ್ತು ಪ್ರಭುತ್ವ ರಕ್ಷಿಸುವುದೇ ಅಲ್ಲದೆ ಪ್ರೇರೇಪಿಸುತ್ತಿದೆ. ಕಾನೂನು ಬದ್ಧ ಆಡಳಿತ ವ್ಯವಸ್ಥೆಯ ಬದಲು ಕಾನೂನು ಉಲ್ಲಂಘಿಸುವ ಈ ಗುಂಪುಗಳು ಅಧಿಕೃತ ಮಾನ್ಯತೆ ಪಡೆಯುತ್ತಿರುವುದರಿಂದ ಬೂರ್ಷ್ವಾ ಗಣತಂತ್ರದ ಬುನಾದಿಯಾದ ಕಾನೂನು ವ್ಯವಸ್ಥೆಯೇ ಶಿಥಿಲವಾಗುತ್ತಿದೆ. ಭಾರತದ ಇತಿಹಾಸದಲ್ಲೇ ಅತ್ಯಂತ ಪ್ರತಿಗಾಮಿ ಚಿಂತನೆ ಮತ್ತು ಪ್ರವೃತ್ತಿಗಳು ವಸಾಹತು ವಿರೋಧಿ ಹೋರಾಟದ ಸಂದರ್ಭದಲ್ಲಿ ನೇಪಥ್ಯಕ್ಕೆ ಸರಿದಿದ್ದವು. ಇಂದು ಇದೇ ಚಿಂತನೆಗಳು, ಪ್ರವೃತ್ತಿಗಳು ಸಂಸದೀಯ ಕ್ಷಿಪ್ರಕ್ರಾಂತಿ ನಡೆಸುವಂತಿದೆ. ಚುನಾವಣೆಯ ಗೆಲುವುಗಳ ಸೋಪಾನದ ಮೇಲೆ ಅಧಿಕೃತ ಪರವಾನಗಿ ಪಡೆದವರಂತೆ ಪ್ರಭುತ್ವ ಮತ್ತು ಆಡಳಿತ ವ್ಯವಸ್ಥೆಯನ್ನು ಪ್ರತಿಗಾಮಿ ಹಾದಿಯಲ್ಲಿ ಮುನ್ನಡೆಸಲಾಗುತ್ತಿದೆ. ಮಾರ್ಕ್ಸ್‌ನ ಸಮಗ್ರ ಅಧ್ಯಯನ ಮತ್ತು ಗ್ರಹಿಕೆ ಈ ಸಂದರ್ಭದಲ್ಲಿ ಹೆಚ್ಚು ಮಹತ್ವ ವಹಿಸುತ್ತದೆ. ಈ ಫ್ಯಾಸಿಸ್ಟ್ ತಂತ್ರಗಾರಿಕೆಯನ್ನು ತಡೆಗಟ್ಟಲು ಮತ್ತು ಹಿಮ್ಮೆಟ್ಟಿಸಲು ಭಾರತೀಯ ಜನತೆಯನ್ನು ವ್ಯಾಪಕ ನೆಲೆಗಟ್ಟಿನಲ್ಲಿ ಒಂದುಗೂಡಿಸಿ ಐಕಮತ್ಯ ಸಾಧಿಸುವ ನಿಟ್ಟಿನಲ್ಲಿ ಮಾರ್ಕ್ಸ್‌ವಾದದ ಸಮಗ್ರ ಅಧ್ಯಯನ ಮತ್ತು ಗ್ರಹಿಕೆ ಅತ್ಯಗತ್ಯ.

–0–0–0–0–